ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೩೧ನೇ ಜನವರಿ ೧೯೮೬, ಮಾಘ ೧೧, ೧೯೦೭ ಶಕ

ವಿಧಾನಸಾಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಸದನವು ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನಲಂಕರಿಸಿದರು]

ವಿರೋಧ ಪಕ್ಷದ ಸದಸ್ಯರು ಧರಣಿ ಕೂತಿದ್ದರು

ವಿರೋಧ ಪಕ್ಷದವರಿಂದ ಧರಣಿ ಮುಷ್ಕರ—ದಾವಣಗೆರೆಯ ತಪ್ಪಿತಸ್ಥ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತು ಕೊಳ್ಳಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ.

(ಧರಣಿ ಹೂಡಿದ್ದ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸು ಹೋಗಿ ಕುಳಿತುಕೊಂಡರು).

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಮಗೆ ಸ್ವಲ್ಪ ತೊಂದರೆ ಕೊಟ್ಟಿದ್ದೇವೆ, ದಯವಿಟ್ಟು ಕ್ಷಮಿಸಬೇಕು. ಅನಿವಾರ್ಯವಾಗಿ ನಾವು ನಿನ್ನೆ ಧರಣಿ ಕೂರತಕ್ಕ ಪಂಟ್ಟಕ್ಕೆ ಹೋಗಬೇಕಾಯಿತು. ತಮಗೆ ತೊಂದರೆಯಾಯಿತು ಎಂಬ ಭಾವನೆ ನಮಗೆ ಇದೆ. ದಾವಣಗೆರೆಯಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ವಿಷಯ ಈ ಸದನದಲ್ಲಿ ಪ್ರಸ್ತಾಪವಾದಾಗ ಈ ಪರಿಸ್ಥಿತಿ ಉದ್ಭವವಾಯಿತು. ಈಗ ನನ್ನ ಪಾದ ಇಷ್ಟೆ. ಅದು ಕಾಶಾಲ ಅವರ ಪ್ರಶ್ನೆ ಇರಬಹುದು ಪೆಂಕಟರಾಮಯ್ಯನವರ ಪ್ರಶ್ನೆ ಇರಬಹುದು ಅಥವಾ ಆ ಕಡೆ ಕುಳಿತ ಸದಸ್ಯರ ಪ್ರಶ್ನೆ ಇರಬಹುದು. ನಮಗೆ ಈ ಸದನದ ಶಾಸಕರ ಗೌರವದ ಪ್ರಶ್ನೆ ಮುಖ್ಯ. ಇದು ಪ್ರಜಾಪ್ರಭುತ್ವ. ಶಾಸಕರು ಜನರ ಪ್ರತಿನಿಧಿಗಳು. ಅವರಿಗೆ ಸಂಪೂರ್ಣ ಗೌರವ ಕೊಡಬೇಕಾಗುತ್ತದೆಂಬ ದೃಷ್ಟಿಯಿಂದ ಈ ವಿಚಾರವನ್ನು ಗಮನಕ್ಕೆ ತಗೆದುಕೊಂಡಿದ್ದೇವೆ. ಪಕ್ಷ ಭೇದದ ವಿಚಾರವನ್ನು ಪರೆತು ಎಲ್ಲರೂ ಗಮನ ಹರಿಸಬೇಕಾದ ವಿಚಾರ ಇದು. ಯಾವುದೋ ಅಧಿಕಾರಿ ಮೇಲೆ ಆರೋಪ ಮಾಡತಕ್ಕ ವಿಚಾರ ಅಲ್ಲ. ಕಾನೂನು ಪಾಲನೆ ಮಾಡತಕ್ಕ ಕಾಲದಲ್ಲಿ ಕಾನೂನಿಗೆ ವಿರುದ್ಧವಾಗಿ ಒಬ್ಬ ಅಧಿಕಾರಿ ವರ್ತಿಸಿದಾಗ ಅವನ ಮೇಲೆ ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಇರತಕ್ಕ ಎಲ್ಲ ಅಧಿಕಾರಿಗಳು ತಪ್ಪಿತಸ್ಥರು ಎಂದು ಹೇಳುತ್ತಿಲ್ಲ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸದಿದ್ದರೆ, ಜನರ ಪ್ರತಿನಿಧಿಗಳಿಗೆ ತೊಂದರೆ ಆದಾಗ ಕ್ರಮ ಜರುಗಿಸದಿದ್ದರೆ ಸಾಮಾನ್ಯ ಜನರ ಪರಿಸ್ಥಿತಿ ಏನಾದೀತು ಎಂಬ ನೋವಿನ ಹಿನ್ನೆಲೆಯಲ್ಲಿ ಈ ವಾದವನ್ನು ಮಂಡನೆ ಮಾಡಿದ್ದೆವು. ಆದರ ಬಗ್ಗೆ ನಿನ್ನೆ ಸಾಕಷ್ಟು ಚರ್ಚೆ ನಡೆಯಿತು. ನಾವು ತಕ್ಷಣ ಧರಣಿ ಕೂರುವ ವಿಚಾರ ಮಾಡಲಿಲ್ಲ. ಸಾಕಷ್ಟು ಒತ್ತಡವನ್ನು ಸರ್ಕಾರದ ಮೇಲೆ ತರತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿದೆವು. ನಿಜ ಹೇಳಬೇಕೆಂದರೆ ಸದನದಲ್ಲಿ ಕುಳಿತಿರತಕ್ಕ ಸದಸ್ಯರು ಈವಿಚಾರದ ಬಗ್ಗೆ ಹೆಚ್ಚಿನ ಗಮನಹರಿಸಿರುವುದು ನಮ್ಮ ಮನಸ್ಸಿಗೆ ಸಮಾಧಾನವಾಗಿದೆ. ಅದು ಏನೇ ಇರಲಿ. ಶಾಸನಸಭಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವಿವರವಾಗಿ ಸದನದ ಪಂಂದಿಟ್ಟಾಗ ಅವು ಸದನದ ಸ್ವತ್ತಾಗುತ್ತವೆ. ಇದರಿಂದ ಒಬ್ಬ ಅಧಿಕಾರಿ ತಪ್ಪಿತಸ್ಥ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಕಾರಣಗಳು ದೊರೆಯುತ್ತವೆ. ಆದ್ದರಿಂದ ಅಂಥ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಮುಂದಿನ ಕ್ರಮ ಜರುಗಿಸದಿದ್ದರೆ ನಾಳೆ ವಿಚಾರಣೆ ಮಾಡತಕ್ಕ ಕಾಲದಲ್ಲಿ ಸತ್ಯಾಂಶ ಹೊರಬೀಳುವುದಿಲ್ಲ ಎಂಬ ಕಾರಣದಿಂದ ಒತ್ತಾಯಿಸಿದ್ದೇವೆ. ಇದನು

ಬಿಟ್ಟು ಇನ್ನು ಯಾವುದೂ ನಮ್ಮ ಗಮನದಲ್ಲಿ ಇಲ್ಲ. ಸರ್ಕಾರದ ಅಭಿಪ್ರಾಯ ನಾವು ಕ್ರಮ ತೆಗೆದು ಕೊಳ್ಳುತ್ತೇವೆ ಎಂಬುದು ಆಗಿತ್ತು. ಶಾಸನಸಭಾ ಸದಸ್ಯರ ಪ್ರಶ್ನೆ ಬಹಳ ಮುಖ್ಯವಾಗಿರುವುದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ನಮ್ಮದಾಗಿತ್ತು. ಸದನದಲ್ಲಿ ಕೆಲವು ಘಟನೆಗಳು ನಡೆದಿವೆ. ಸದನದಲ್ಲಿ ಸಾಮಾನ್ಯ ಪ್ರಜೆಗೆ ಸಂಬಂಧಪಟ್ಟ ವಿಷಯಗಳು ಬಂದಾಗ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿರುವ ನಿದರ್ಶನಗಳು ಇವೆ ಎಂಬ ವಿಷಯಗಳನ್ನು ಹೇಳುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಆ ಸಂದರ್ಭದಲ್ಲಿ ನಾವು ಧರಣಿ ಕೂರತಕ್ಕ ಮಟ್ಟಕ್ಕೆ ಹೋಗಬೇಕಾಯಿತು. ಸತ್ಯಾಗ್ರಹ ಮಾಡಬೇಕು, ವಿಚಾರ ಹೊರಗಡೆ ಬರಬೇಕು, ನಿಷ್ಪಕ್ಷಪಾತವಾದ ತನಿಖೆ ಆಗಬೇಕು ಎಂಬ ದೃಷ್ಟಿಯಿಂದ ನಾವು ಆ ಒತ್ತಡವನ್ನು ತಂದೆವು. ಸದನದ ಕಾರ್ಯಕಲಾಪಗಳು ಮುಂದುವರಿದು ಕೊಂಡು ಹೋಗಬೇಕೆಂಬ ಆಸೆ ನಮಗೂ ಇದೆ. ಅದಕ್ಕೆ ಸಂಪೂರ್ಣ ಸಹಕಾರವನ್ನು ನಾವು ಕೊಡಬೇಕಾಗುತ್ತದೆ. ಪ್ರತಿಯೊಂದಕ್ಕೂ ಧರಣಿ ಸತ್ಯಾಗ್ರಹ ಮಾಡಬೇಕೆಂಬ ಉದ್ದೇಶ ನಮ್ಮದಲ್ಲ. ಇದೇ ರೀತಿ ನಡೆಯುತ್ತಾ ಹೋದರೆ ಯಾರಿಗೂ ರಕ್ಷಣೆ ಸಿಗಲಾರದು ಎಂಬ ಹಿನ್ನೆಲೆಯಲ್ಲಿ ಧರಣಿ ಮಾಡಬೇಕಾಯಿತು ಇವತ್ತು ಕೂಡ ಧರಣಿಯನ್ನು ಮುಂದುವರಿಸಿದ್ದೆವು. ತಾವು ವಿನಂತಿ ಮಾಡಿಕೊಂಡ ಮೇಲೆ ತಮ್ಮ ವಿನಂತಿಯನ್ನು ಆದೇಶವೆಂದು ಭಾವಿಸಿ ನಾವು ನಮ್ಮ ಸ್ಥಾನಗಳಿಗೆ ವಾಪಸ್ಸು ತೆರಳಿದ್ದೇವೆ. ಇದರ ಅರ್ಥ ಇವತ್ತು ನಾವು ಧರಣಿ ನಿಲ್ಲಿಸಿದ್ದೇವೆಂದು ಅಲ್ಲವೆಂಬ ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ಇವತ್ತು ನಮ್ಮ ಗುರಿ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕೆಂಬುದು ಮಾತ್ರವೇ ಮುಖ್ಯವಲ್ಲ ಸಸ್ಪೆಂಡ್ ಮಾಡುವ ವಿಚಾರದ ಮೂಲಕ ಇಂಥ ಘಟನೆಗಳು ಕರ್ನಾಟಕದಲ್ಲಿ ನಡೆಯಬಾರದೆಂಬುದಾಗಿದೆ. ನಾನು ಜನ ಸಾಮಾನ್ಯರ ಮಂತ್ರಿ ಶಾಸಕರ ಪರವಾಗಿ ಮಾತನಾಡುತ್ತಿದ್ದೇನೆ. ತಪ್ಪು ಮಾಡತಕ್ಕ ಅಧಿಕಾರಿಗಳ ಮನಸ್ಸಿನಲ್ಲಿ ಕಾನೂನು ಚೌಕಟ್ಟಿನ ಹೆದರಿಕೆ ಇಲ್ಲದಿದ್ದರೆ ನಾಳೆಅನ್ಯಾಯಗಳ ಸರಪಳಿ ದೊಡ್ಡದಾಗುತ್ತದೆ. ತಮ್ಮ ವಿನಂತಿ ಮೇರೆಗೆ ನಾವು ಇಲ್ಲಿ ಕುಳಿತಿದ್ದೇವೆ. ಈಗ ಸರ್ಕಾರದವರು ಏನು ಹೇಳುತ್ತಾರೆಂದು ಗೊತ್ತಿಲ್ಲ. ನಾವು ಯಾವ ವಿಚಾರಕ್ಕೆ ಆಗ್ರಹಪಡಿಸಿ ಸತ್ಯಾಗ್ರಹ ಮಾಡಬೇಕಾಯಿತು ಆ ವಿಚಾರಕ್ಕೆ ಸರ್ಕಾರ ಈಗಲಾದರೂ ಕೂಡ ಒಪ್ಪುತ್ತದೆಂಬ ನಂಬಿಕೆ ಇಟ್ಟು ಮತ್ತು ತಮ್ಮ ಆದೇಶವನ್ನು ಅನುಸರಿಸಿ ಕುಳಿತಿದ್ದೇವೆ. ನಾವು ಧರಣಿ ಮಾಡುವುದಕ್ಕಾಗಿಯೇ ಸದನಕ್ಕೆ ಬಂದಿಲ್ಲ. ನಮಗೂ ಕೆಲಸಗಳು ಇರುತ್ತವೆ, ಜವಾಬ್ದಾರಿ ಇರುತ್ತದೆ. ಆದ್ದರಿಂದ ಇಲ್ಲಿ ಬಂದು ಕೂತಿದ್ದೇವೆ. ಸರ್ಕಾರದವರು ಏನು ಹೇಳಿಕೆ ಕೊಡುತ್ತಾರೋ ಕೊಡಲಿ. ಆ ಹೇಳಿಕೆಯನ್ನು ಈ ಸದನ ಕೇಳಲಿ. ಈಗ ಅವರು ಹೇಳುವ ಉತ್ತರ ಸರಿಬರದಿದ್ದರೆ, ಕ್ಷಮಿಸಬೇಕು, ಅನಿವಾರ್ಯವಾಗಿ ಈ ಮಾತನಾಡುತ್ತಿದ್ದೇನೆ, ಇದು ಜನ ಹಿತದೃಷ್ಟಿಯಿಂದ ಆಡತಕ್ಕ ಮಾತು, "ನಾವು ಧರಣಿಯನ್ನು ಮುಂದುವರೆಸಬೇಕಾಗುತ್ತದೆ." ಅಂತಹ ಅನಿವಾರ್ಯ ಪ್ರಸಂಗ ಬಂದರೆ, ಧರಣಿ ಮುಂದುವರೆಸಬೇಕಾಗುತ್ತದೆ. ಆ ವಿಚಾರ ಅನಂತರದ ಪ್ರಶ್ನೆ. ಆದೇನೇ ಇರಲಿ ತಮ್ಮ ಬಗ್ಗೆ ಏನು ನಂಬಿಕೆಯನ್ನು ಇಟ್ಟಿದ್ದೇವೆ.....

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ಧರಣಿ ಮುಂದುವರೆಸುವುದಕ್ಕೆ ನಾವು ಯಾರೂ ಬೇಡ ಎಂದು ಹೇಳುವುದಿಲ್ಲ. The Government cannot become the slave to the opposition. Do you want the Government to be slave to the opposition ? What do you mean by this ? ಇಬ್ಬರಲ್ಲಿ ಹೊಂದಾಣಿಕೆಯಾಗಿ ಸ್ಟೇಟ್ ಮೆಂಟ್ ಮಾಡಿ ಎಂದು ಹೇಳಿದರೆ is it the statement that we see from the Opposition Leader ? If he wants to give the threat let him threat.

ಅಧ್ಯಕ್ಷರು.—ಬಂಗಾರಪ್ಪನವರೇ ತಾವು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರಿಗೆ ನನ್ನ ಮಾತು.....

SRI H.D. DEVE GOWDA.—It is his prerogative right to stall the proceedings of the House. I have no objection. It is his prerogative right.

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರೇ, ಅಲ್ಲಿ ಮಾತನಾಡಬೇಕಾದರೆ ತಾವು ಇರಲಿಲ್ಲ.

SRI H.D. DEVE GOWDA.—We cannot take away his right.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಿ. ದೇವೇಗೌಡರ ಮಾತನ್ನೇ ತಾವು ಕೇಳಿ.

ಅಧ್ಯಕ್ಷರು.—ತಾವು ಮುಂಗಿಸಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ತಮ್ಮ ಛೇಂಬರ್‌ನಲ್ಲಿ ತಿಳಿವಳಿಕೆ ಬಂದ ಮೇಲೆ ಅಷ್ಟುವಂಟ್ಟಿಗೆ ಹೇಳಿದರೆ ಸರಿ. ಅಲ್ಲಿ ಆದ ತಿಳುವಳಿಕೆ ಪ್ರಕಾರ ನಡೆದು ಕೊಳ್ಳುವುದಕ್ಕೆ ಬಂದಿದೇವೆ. ಆದಾಗದಿದ್ದರೆ, ಇದಾಗದಿದ್ದರೆ ಧರಣಿ ಮುಂದುವರೆಸುತ್ತೇವೆ ಎಂದು ಹೇಳುವುದು ಸರಿಯಲ್ಲ. ಬಂದು ತಿಳುವಳಿಕೆ ಬಂದಿದೆ. ಆದರ ಪ್ರಕಾರ ಸರ್ಕಾರ.....

ಅಧ್ಯಕ್ಷರು.—ಬಂಗಾರಪ್ಪನವರೇ ತಾವು ಚೆನ್ನಾಗಿ ಹೇಳಿದ್ದೀರಿ. ಕಂಡೀಷನಲ್ ಬೇಡ. ಆದರೆ ಗೀದರೆ ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಚೇಂಬರ್‌ನಲ್ಲಿ ಒಂದು ತಿಳಿವಳಿಕೆ ಬಂದಿದೆ. ಆದರ ಪ್ರಕಾರ ಇಬ್ಬರೂ ನಡೆದುಕೊಳ್ಳಬೇಕು. ಅದು ಬಿಟ್ಟು ಈ ತರಹ ತ್ರೆಟ್ ಕೊಡುವುದು ಸರಿಯಲ್ಲ. ಒಂದು ತಿಳಿವಳಿಕೆ ಬಂದಮೇಲೆ ಇಬ್ಬರೂ ಅದನ್ನು ಆನರ್ ಮಾಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ,.....

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ರಘುಪತಿಯವರು ಹೇಳಲಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಇಷ್ಟೇ ಪ್ರಾರ್ಥನೆ ಮಾಡಿ ಕೊಳ್ಳುವುದು. ಏನು ಒಪ್ಪಂದ ಆಗಿದೆ ಆದರ ಪ್ರಕಾರ ಚರ್ಚೆ ಹೆಚ್ಚು ಮುಂದುವರೆಯಬೇಕಾಗಿಲ್ಲ. ಸಂಕ್ಷಿಪ್ತವಾಗಿ ವಿರೋಧಪಕ್ಷದ ನಾಯಕರು ಹೇಳಿಕೆ ಮಾಡಲಿ. ಆದಾದಮೇಲೆ ಮಾನ್ಯ ಸಚಿವರು ಒಂದು ಹೇಳಿಕೆ ಕೊಡುತ್ತಾರೆ. ಅಷ್ಟು ಬೇಕೇ ಹೊರತು ವಿಶ್ಲೇಷಣೆ ಬೇಡ ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮ ವೇದನೆಯೆಲ್ಲಾ ಮುಂದಿತು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರಾದ ದೇವೇಗೌಡರು, ಪಿತಕ್ಕೆ.....

ಅಧ್ಯಕ್ಷರು.—ಆ ವಿಷಯ ಬಿಟ್ಟುಬಿಡಿ. ಜಾಸ್ತಿ ಹೊತ್ತು ಬೇಡ ದಯವಿಟ್ಟು.

ಶ್ರೀ ಎಸ್. ಬಂಗಾರಪ್ಪ.—ಅನಿವಾರ್ಯವಾಗಿ ಹೇಳಬೇಕಾಗತ್ತದೆ.

ಅಧ್ಯಕ್ಷರು.—ಅನಿವಾರ್ಯ ಬಿಟ್ಟುಬಿಡಿ.

ಶ್ರೀ ಎಸ್. ಬಂಗಾರಪ್ಪ.—ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಬೇಡ, ಅನಿವಾರ್ಯ ಬೇಡ್ರಿ.

ಶ್ರೀ ಎಸ್. ಬಂಗಾರಪ್ಪ.—ನೀವೇ ಮಾತನಾಡುತ್ತಾ ಇದ್ದರೆ ಯಾರಿಗೆ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ? There must be some limit.

ಶ್ರೀ ರಘುಪತಿ.—ವಿರೋಧಪಕ್ಷದ ನಾಯಕರು ತಮಗೆ ಬೆದರಿಕೆ ಹಾಕುವುದು ಸರಿಯಲ್ಲ. ವೀರಪ್ಪ ಮೊಯಿಲಿಯವರು ವಿರೋಧಪಕ್ಷದ ನಾಯಕರಾಗಿದ್ದರು. ದೇವೇಗೌಡರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಬೊಮ್ಮಾಯಿಯವರು, ಲಕ್ಷ್ಮೀಸಾಗರ್ ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಯಾವುದೇ ಒಂದು ಒಪ್ಪಂದಕ್ಕೆ ಬಂದಮೇಲೆ, ತಮ್ಮ ಮೇಲೆ ಈ ತರಹ ಆಕ್ರೋಶವನ್ನು ವ್ಯಕ್ತಪಡಿಸುವುದು ಸರಿಯಲ್ಲ. ಅಧ್ಯಕ್ಷರ ಮೇಲೆ ಆಕ್ರೋಶ ವ್ಯಕ್ತಪಡಿಸಬೇಡಿ.

ಅಧ್ಯಕ್ಷರು.—ನಿಮಗೆ ಒಂದೇ ವಿನಂತಿ ಮಾಡಿಕೊಳ್ಳುತ್ತೇನೆ. ಸಿಟ್ಟು ಬೇಡ.

ಶ್ರೀ ಎಸ್. ಬಂಗಾರಪ್ಪ.—ನೀವೇ ಉದ್ದಕ್ಕೆ ಮಾತನಾಡುತ್ತಾ ಹೋದರೆ ಯಾರಿಗೆ ಮಾತನಾಡುವುದಕ್ಕೆ ಸಾಧ್ಯ? ಹಾಗಾದರೆ ನೀವೇ ಮಾತನಾಡಿ.

ಶ್ರೀ ಎಂ. ರಘುಪತಿ.—ವಿರೋಧಪಕ್ಷದ ನಾಯಕರು ತಾಳ್ಮೆಯಿಂದ ಇರಬೇಕು.

ಶ್ರೀ ಎಸ್. ಬಂಗಾರಪ್ಪ.—ನಾನು ತಾಳ್ಮೆಯಿಂದ ಇದ್ದೇನೆ. ಉದ್ದಕ್ಕೂ ಅಧ್ಯಕ್ಷರೇ ಮಾತನಾಡಿದರೆ ನಾವು ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಜಿ. ಬಸವನಗೌಡ.—ವಿರೋಧಪಕ್ಷದ ನಾಯಕರು ಮಾತನಾಡುವುದು ಬೇಡ ಎಂದು ಹೇಳುವುದಿಲ್ಲ. ಅದರೆ ಬೆದರಿಕೆ ಬೇಡ.

ಅಧ್ಯಕ್ಷರು.—ಬಂಗಾರಪ್ಪನವರೇ, ವೀರಪ್ಪನವರು ಮಾತನಾಡಲಿ. ಕಾಂಟ್ರವರ್ಸಿ ಬೇಡ. ಸಿಟ್ಟಾಗಿ ತೆಗೆದಿಡಿ,

ಶ್ರೀ ಎಸ್. ಬಂಗಾರಪ್ಪ.—ನನ್ನ ಉದ್ದೇಶ ಇಷ್ಟೆ, ತವಂಗೆ ಬೆದರಿಸಬೇಕು ಎಂಬ ಉದ್ದೇಶ ಇಲ್ಲ. ನಾನು ಹೇಳತಕ್ಕ ವಿಚಾರವನ್ನು ಮಾತನಾಡುವುದಕ್ಕೆ ಅವಕಾಶನಿಲ್ಲ ಎಂದರೆ ಇನ್ನು ಯಾರಿಗೆ ಹೇಳಬೇಕು? ಎಲ್ಲಾ ಮಾತನಾಡುತ್ತಿದ್ದರೆ ಭಾಷಣ ಮಾಡುವುದಕ್ಕೆ ಆಗುತ್ತದೆಯೆ? ಇದು ಸೆನ್ಸಿಟೀವ್ ಮ್ಯಾಟರ್. ಮಾನ್ಯ ಸಭಾಧ್ಯಕ್ಷರೇ, ನಾನು ಹೇಳತಕ್ಕದ್ದು ಇಷ್ಟೆ. ನಾನು ಶಾಂತಿಯುತವಾಗಿ ನೀಟಾಗಿ ಹೇಳುತ್ತಾ ಇರಲಿಲ್ಲವೆ? ದೇವೇಗೌಡರಿಗೆ ಏನು ಹೇಳಿದೆ ಎಂಬುದು ಗೊತ್ತಿಲ್ಲ. ನಾನು ಸ್ಪಷ್ಟಪಡಿಸುತ್ತೇನೆ, ಮಾನ್ಯ ಸಚಿವರು ತಿಳಿದುಕೊಳ್ಳಬೇಕು.. ...

ಶ್ರೀ ಎಚ್. ಡಿ. ದೇವೇಗೌಡ.—ಅನಿವಾರ್ಯ ಪ್ರಸಂಗಬಂದರೆ ಧರಣಿ ಕೂಡಬೇಕು ಎಂದರೆ ಏನು? ಅಂಡರ್‌ಸ್ಟ್ಯಾಂಡಿಂಗ್ ಏನಾಗಿದೆ? ಹಾಗಾದರೆ ಅಧ್ಯಕ್ಷರಿಗೆ ಗೌರವ ಏನಂ ಉಳಿದಿದೆ? ಏತಕ್ಕೆಅದು ಮಾಡಬೇಕು?

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ತಾವು ಕೂತರೆ ಹೇಳುತ್ತೇನೆ. ಅಲ್ಲಿ ಏನು ನಡೆದಿದೆ ಎಂಬ ವಿಚಾರಗಳನ್ನು ವಿವರವಾಗಿ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ ಎಂದು ಸುಮ್ಮನಿದ್ದೆ. ಅಧ್ಯಕ್ಷರ ಹತ್ತಿರ ಮಾತನಾಡುವಾಗ ಅವರು ಇರಲಿಲ್ಲ. ಧರಣಿ ಸತ್ಯಾಗ್ರಹ ಮುಂದುವರೆಸಬೇಕೇ ಬೇಡವೇ ಎಂಬ ತೀರ್ಮಾನ ಅಲ್ಲಿ ಆಗಿರಲಿಲ್ಲ. ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ತೀರ್ಮಾನ ಆಗದೇ ಇದ್ದರೆ ಮುಂದುವರೆಸಬಹುದು. ಮುಂದೂ ವರೆಸಿ. ಅವರ ರೈಟ್ಸ್ ಕಿತ್ತುಕೊಳ್ಳುವುದಕ್ಕೆ ನಾವ್ಯಾರೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಸ್ಪಷ್ಟಪಡಿಸುತ್ತೇನೆ...

ಶ್ರೀ ಎಂ. ರಘುಪತಿ.—ಬಂಗಾರಪ್ಪನವರೇ, ದೇವೇಗೌಡರು ಹೇಳುವುದರಲ್ಲಿ ಅರ್ಥ ಇದೆ. ಅವರಿಗೆ ಏನು ಹೇಳುತ್ತಿದ್ದಾರೆಂದರೆ ಸರ್ಕಾರದಿಂದ ಉತ್ತರ ಕೇಳಿದಮೇಲೆ ಏನಂ ಬೇಕಾದರೂ ಹೇಳಬಹುದಾಗಿತ್ತು, ಸರ್ಕಾರದಿಂದ ಉತ್ತರ ಇನ್ನೂ ಬಂದಿಲ್ಲ. ಅಲ್ಲಿ ಆದ ಒಪ್ಪಂದದ ಪ್ರಕಾರ ವಿರೋಧಪಕ್ಷದ ನಾಯಕರು ಸಂಕ್ಷಿಪ್ತವಾಗಿ ಹೇಳಿಕೆ ಕೊಡಬೇಕು. ನಂತರ ಸರ್ಕಾರದಿಂದ ಸ್ಟೇಟ್‌ಮೆಂಟ್ ಮಾಡಬೇಕು, ಅದನ್ನು ಹೇಳುವುದಮ್ನು ಬಿಟ್ಟು ಮೊದಲೇ ಪೀಠಿಕೆ ಹಾಕಿ ಕಂಡೀಷನ್ ಹಾಕುವುದು ಸರಿಯಲ್ಲ ಎಂದು ದೇವೇಗೌಡರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಸರ್ಕಾರದವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಂ. ರಘುಪತಿ.—ಬಂಗಾರಪ್ಪನವರೇ ಆಮೇಲೆ ಬೇಕಾದರೆ ತಾವು ಹೇಳಿ.

ಶ್ರೀ ರಾಜವರ್ಧನ್,—ಹೋಂ ಮಿನಿಸ್ಟರ್ ಸ್ಟೇಟ್‌ಮೆಂಟ್ ಕೊಡುತ್ತಾರೆ. ಈಗ ಅವರು ಮಾತನಾಡುವ ನೆಸೆಸಿಟಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ಏನು ತೀರ್ಮಾನವಾಗಿದೆಯೋ ಅದರ ವಿರುದ್ಧ ನೀವು ಮಾತನಾಡಬೇಡಿ. ಇದು ಪ್ರಸ್ತಾಪ ಮಾಡಬೇಕು ಎಂದು ತೀರ್ಮಾನ ಆಗಿದೆ. This is too much. What is this?

ಶ್ರೀ ಜಿ. ನಾರಾಯಣಕುಮಾರ್.—ದೇವೇಗೌಡರು ಹೇಳಿದ ಮಾತಿನಲ್ಲಿ ಅರ್ಥ ಇದೆ. ಅವರೂ ವಿರೋಧಪಕ್ಷದ ಮುಖಂಡರಾಗಿದ್ದರು. ತಮ್ಮ ಕಾಲದಲ್ಲಿ ಈ ತರಹ ಘಟನೆ ನಡೆದಿರಲಿಲ್ಲ. ಮಾತುಕತೆಗೆ ಕೂತ್ಕೊಂಡ ತಕ್ಷಣ ತೀರ್ಮಾನವಾಗುತ್ತಿತ್ತು. ಈಗ ವಿರೋಧಪಕ್ಷದ ಮುಖಂಡರು ಬಂಗಾರಪ್ಪನವರು ಇಲ್ಲಿ ಏತಕ್ಕೆ ಚಲ್ಲಾಟ ಆಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಬಂಗಾರಪ್ಪದವರ ಭಾಷಣ ಬೇಡ ಎಂದೂ ಮನವಿ ಮಾಡಿಕೊಳ್ಳುತ್ತಿದ್ದೇನೆ,

SRI S. BANGARAPPA.—Why do you allow this to go on record ?

ಅಧ್ಯಕ್ಷರು.—ಏನ್ರಿ, ಈ ತರಹ ಆದರೆ ಹೇಗೆ ಸಭೆ ನಡೆಸಬೇಕು ? ನೀವ್ ಅವರು ಅವರಿಗೆ ಹೇಳಬೇಕು.

SRI S. BANGARAPPA.—You cannot make us the target here...

ಶ್ರೀ ಎಂ. ರಘುಪತಿ,—ನಾನಿಷ್ಟೇ ಮನವಿ ಮಾಡಿಕೊಳ್ಳುವುದು...

ಶ್ರೀ ಜೆ. ಎಚ್. ಪಟೀಲ್.—ವಿರೋಧಪಕ್ಷದ ನಾಯಕರ ಜೊತೆ ಮಾತನಾಡುವಾಗ ಬಸವಲಿಂಗಪ್ಪ ನವರಿದ್ದರು, ನಾಗರತ್ನಮ್ಮನವರಿದ್ದರು, ನಾನು ಇದ್ದೆ. ಹೋಂ ಮಿನಿಸ್ಟರ್ ಇದ್ದರು. ಅವರ ಜೊತೆ ಎಲ್ಲಾ ಮಾತನಾಡಿದ್ದೇವೆ. ಪ್ರಾರಂಭದಲ್ಲೇ ಹೇಳಿದ ಹಾಗೆ ಇಂಥ ವಿಷಯಗಳನ್ನು ಏತಕ್ಕೆ ಪ್ರಸ್ತಾಪ ಮಾಡಿದ್ದಾರೆ ಎಂಬ ಬಗ್ಗೆ ಹೇಳಿದ್ದಾರೆ. ಇದು ಸದನದ ಗಂಭೀರತೆ ಪ್ರಶ್ನೆ. ಸದಸ್ಯರ ರಕ್ಷಣೆ ಪ್ರಶ್ನೆ. ಮತ್ತು ರಾಜ್ಯ ಸರ್ಕಾರ ಹೇಗೆ ನಡೆಸಬೇಕು ಎಂಬ ವಿಚಾರ ಎಲ್ಲಾ ಸೇರಿದೆ ಧರಣಿ ವಾಪಸ್ ತೆಗೆದು ಕೊಂಡು ಸರ್ಕಾರ ಏನು ಹೇಳುತ್ತದೋ ಆದರ ಮೇಲೆ ತೀರ್ಮಾನ ಮಾಡೋಣ ಎಂದು ಒಪ್ಪಂದ ಆಗಿದೆ. ಆಷ್ಟೇ ತಾನೇ ಸ್ವಾಮಿ? ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ವಿಶ್ಲೇಷಣೆ ಕೊಟ್ಟಿದ್ದಾರೆ. ಮಾನ್ಯ ಗೃಹಮಂತ್ರಿಗಳು ಈಗ ಹೇಳಿಕೆ ಕೊಡಲಿ. ಮುಂದೆ ಕಲಾಪ ನಡೆಸಿಕೊಂಡು ಹೋಗೋಣ.

ಅಧ್ಯಕ್ಷರು. ಬಂಗಾರಪ್ಪನವರೇ ಸರಕಾರದವರು ಹೇಳಿಕೆ ಕೊಡಲಿ. ಆಮೇಲೆ ನೋಡೋಣ, ತಾವು ಹೇಳಿದ್ದೀರಲ್ಲ. ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ ಅವರೇನು ಹೇಳುತ್ತಾರೋ ನೋಡೋಣ,

ಶ್ರೀ ಎಸ್. ಬಂಗಾರಪ್ಪ. —ಮಾನ್ಯ ಸಭಾಧ್ಯಕ್ಷರೇ, ಹೇಳಿಕೆ ಕೊಡಬಾರದು ಎಂದು ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ. ನಾನು ಕೊನೇ ಮಾತನಾಡಿ ಮುಗಿಸುತ್ತಿದ್ದೆ. ಆದರೆ...

ಅಧ್ಯಕ್ಷರು.—ಆದರೆ ಗೀದರೆ ಬೇಡ. ನನ್ನ ಮಾತು ಕೇಳಿ. ತಾವು ಹೇಳಿದ್ದೀರಲ್ಲ ದಯವಿಟ್ಟು ಕುಳಿತುಕೊಳ್ಳಿ. ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಬೆಳಿಸಂವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನಾನು ಈಗ.....

ಅಧ್ಯಕ್ಷರು,— ಸ್ವಲ್ಪ ಕೇಳಿ ಸ್ವಾಮಿ, ಬಂಗಾರಪ್ಪನವರೇ.....

ಶ್ರೀ ಎಸ್. ಬಂಗಾರಪ್ಪ.—Should I not conclude my speech here ? ಮಾನ್ಯ ಸಭಾಧ್ಯಕ್ಷರೇ, ಎವರಗಳು ಬೇಕಾಗಿಲ್ಲವೆನ್ನುವ ಅಭಿಪ್ರಾಯವನ್ನು ರಘುಪತಿಯವರು ಹೇಳಿದರು. ಏದ ಈ ಒಂದು ವಿಷಯ ಪ್ರಾರಂಭವಾಯಿತು ಎಂದು ನಾನು ಪೀಠಿಕಾ ರೂಪದಲ್ಲಿ ಹೇಳುತ್ತಿದ್ದೆ.

(ಗೊಂದಲ)

ಅಧ್ಯಕ್ಷರು.— ನಿನ್ನೆ ದಿವಸ ಧರಣಿಯಲ್ಲಿ ತಾವು.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ — ಈ ರೀತಿ ಮಾತನಾಡಿದರೆ ಸದನದಲ್ಲಿ, ಕಾರ್ಯಕಲಾಪದಲ್ಲಿ ಮಾತ ನಾಡುವುದಕ್ಕಾಗುವುದಿಲ್ಲ. ಹಕ್ಕನ್ನು ಚಲಾವಣೆ ಮಾಡುವ ಸಂದರ್ಭದಲ್ಲಿ ನಾವೂ ಕೂಡಾ ಮಾತನಾಡ ಬೇಕಾಗುತ್ತದೆ.

ಅಧ್ಯಕ್ಷರು.— ನಿಮ್ಮ ಹಕ್ಕು ನಿಮಗೆ ಗೊತ್ತಿದೆ, ನಮ್ಮ ಹಕ್ಕು ನಮಗೆ ಗೊತ್ತಿದೆ, ಆದರೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಈ ರೀತಿ ತಾವು ಮಾತನಾಡಿದರೆ.....

ಅಧ್ಯಕ್ಷರು. — ತಾವು ಸಮಾಧಾನ ಮಾಡಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ಸಮಾಧಾನ ಎಂದರೆ ಏನು ಸ್ವಾಮಿ.

(ಗೊಂದಲ)

ಅಧ್ಯಕ್ಷರು,— You are shadow Chief Minister of this house.....

ಶ್ರೀ ಎಸ್. ಬಂಗಾರಪ್ಪ.— ವಿರೋಧಪಕ್ಷದ ನಾಯಕರನ್ನು ಈ ರೀತಿ ಗೌರವ ಕೊಟ್ಟು ಮಾತನಾಡಬೇಕಾದರೆ ಏನು ಸ್ವಾಮಿ ? If these things are allowed to go on. It is very difficult.

ಅಧ್ಯಕ್ಷರು,— ಸಮಾಧಾನದಿಂದ ತಮ್ಮ ಭಾಷಣವನ್ನು ಮುಗಿಸಿ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ನಾವು ನಮ್ಮ ಪಕ್ಷದ ಪರವಿಯಿಂದ ಯಾವ ಒಂದು ವಿಚಾರವನ್ನು ಇಟ್ಟು ಇಲ್ಲಿ ಸತ್ಯಾಗ್ರಹವನ್ನು ಮಾಡಿದೆವೋ ಆ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯ ಏನು ಎಂಬುದನ್ನು ನಾನು ಸದನದ ಮುಖಾಂತರ ಹೇಳಬೇಕು ಎನ್ನುವ ಉದ್ದೇಶದಿಂದ ನಾನು ಪ್ರಸ್ತಾಪ ಮಾಡುವುದು.

ಅಧ್ಯಕ್ಷರು.— ಬಂಗಾರಪ್ಪನವರೇ, ಈಗ ಅದು ಬೇಡ, ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ ಮೇಲೆ ತಾವು ಹೇಳಿ.

ಶ್ರೀ ಎಸ್. ಬಂಗಾರಪ್ಪ.— ಹಾಗಾದರೆ ನೀವೇ ಮಾತನಾಡಿ. ನೀವೇ ಮಾತನಾಡುವುದು ಒಳ್ಳೆಯದು, ನಾನು ಏನನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ,

ಅಧ್ಯಕ್ಷರು,— ಬಂಗಾರಪ್ಪನವರೇ, ನೀವು.....

ಶ್ರೀ ಎಸ್. ಬಂಗಾರಪ್ಪ.— ನಾವು ಹೇಳುವುದನ್ನು ತಾವು ಕೇಳುವುದಿಲ್ಲವೆಂದ ಮೇಲೆ ಇನ್ನು ಏನು ಮಾಡುವುದು ಸ್ವಾಮಿ ?

ಶ್ರೀ ಎಚ್. ಡಿ. ದೇವೇಗೌಡ.— ನಿನ್ನ ನಡೆದುಕೊಂಡುದರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಎಂದರೆ ನಿನ್ನ ಧರಣಿ ಮಾಡಿದ ಕಾರಣ ಏನು, ಅದು ಅಕಾರಣವೋ, ಸಕಾರಣವೋ ಎನ್ನುವ ಬಗ್ಗೆ ಕರ್ನಾಟಕದ ಳಿ ಕೋಟಿ ಜನರಿಗೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಈ ವೇದಿಕೆಯ ಮುಖಾಂತರ ಜನರಿಗೆ ಸಂದೇಶವನ್ನು ಕೊಡುತ್ತಿದ್ದಾರೆ. ಅಧ್ಯಕ್ಷರು ತಮ್ಮನ್ನು ''Shadow Chief Minister'' ಎಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.— ಯಾವ ರೀತಿಯಾಗಿ ನಾವು ಳಿ ಕೋಟಿ ಜನರಿಗೆ ಈ ವಿಚಾರವನ್ನು ಹೇಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆಂದು ಅವರು ಹೇಳಿದರು. ಅವರೂ ಕೂಡ ಕರ್ನಾಟಕ ರಾಜ್ಯದಲ್ಲಿ ಇರುವ ಜನತೆಯ ಮಾನ ಮರ್ಯಾದೆಯನ್ನು ಕಾಪಾಡಬೇಕು ಎನ್ನುವ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿದಿದ್ದಾರೆ. ಆ ಬಗ್ಗೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆ ಬಗ್ಗೆ ಚರ್ಚೆ ಮಾಡಬೇಕೆಂದರೆ ಮಾಡೋಣ ಅವರ ವ್ಯಂಗ್ಯದ ಮಾತು ನನಗೆ ಅರ್ಥವಾಗುತ್ತದೆ. ಅದಕ್ಕೆ ನಾವು ಉತ್ತರ ಕೊಡಬಹುದು, ಕ್ಷಮಿಸಬೇಕು, ನಾವು ಆ ಬಗ್ಗೆ ಮಾತನಾಡುವುದಿಲ್ಲ. ಅದು ನಿಮಗೆ ಅರ್ಥವಾಗಿದೆ. ಆದುದರಿಂದ ಮಾನ್ಯ ಸಭಾಧ್ಯಕ್ಷರೇ, ನಮ್ಮ ಪಕ್ಷದ ನೀತಿ ನಿಲುವು ಏನೆಂದು ಹೇಳಬೇಕಾದರೆ, ನಾವು ಒಳಗಡೆ ಏನು ಮಾತುಕತೆಯಾಡಿದ್ದೇವೆ ಆ ಬಗ್ಗೆ ತಮಗೆ ಗೌರವ ಕೊಟ್ಟು ಸರ್ಕಾರದ ಅಭಿಪ್ರಾಯವನ್ನೂ ನಾವು ತಿಳಿದುಕೊಂಡಿದ್ದೇವೆ. ಇಲ್ಲದೇ ಇದ್ದರೆ ನಾವು ಇಲ್ಲಿ ಬಂದು ಕೂತು ಕೇಳುವ ಕಾರಣ ಇರುತ್ತಿರಲಿಲ್ಲ. ಈ ವಿಚಾರ ಬಂದಾಗ ಧರಣಿ ಕಾರಬೇಕಾಗಿ ಬಂದ ಪ್ರಸಂಗದ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆ.

ಅಧ್ಯಕ್ಷರು.— ರಿಸಲ್ಟನ್ನು ಆ ಮೇಲೆ ನೋಡೋಣ. ಈಗ ಬೇಡ.

ಶ್ರೀ ಎಸ್. ಬಂಗಾರಪ್ಪ.— ಆದುದರಿಂದ ಸರ್ಕಾರದವರು ಹೇಳಿಕೆ ಕೊಟ್ಟ ಮೇಲೆ ಮಿಕ್ಕದ್ದನ್ನು ಕೇಳೋಣ ಇವತ್ತು ಅವರು ಯಾವ ರೀತಿ ಹೇಳಿಕೆ ಕೊಡುತ್ತಾರೋ, ಆತನನ್ನು ಸಸ್ಪೆಂಡ್ ಮಾಡುತ್ತಾರೋ ನೋಡಬೇಕು. ನ್ಯಾಯಬದ್ಧವಾಗಿ ವಿಚಾರಣೆ ಆಗಬೇಕೆಂದು ನನ್ನ ಒತ್ತಾಯ ಇದೆ.

ಶ್ರೀ ಎಂ. ರಘುಪತಿ.— ಇದನ್ನೆಲ್ಲಾ ಅವರು ಮಾತನಾಡಬಾರದು, ಈ ರೀತಿ ಮಾತನಾಡಬೇಕೆಂದೇನೂ ಇಲ್ಲ. ಅವರೂ ಕೂಡಾ ಸಹಕಾರ ಮಾಡಬೇಕಾಗುತ್ತದೆ ಮಾನ್ಯ ದೇವೇಗೌಡರು ಹಲವಾರು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದರು.

(ಮುಂದಿದೆ)

ಗೃಹ ಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಮಾಡಬೇಕೆಂದು ತೀರ್ಮಾನ ಆಗಿತ್ತು. ಆದರೆ ಆ ರೀತಿ ಮಾಡಬೇಕು. ಈ ರೀತಿ ಮಾಡಬೇಕೆಂದು ಅವರ ಡೈರೆಕ್ಷನ್ ಮೇಲೆ ಸರ್ಕಾರವನ್ನು ನಡೆಸಬೇಕೆಂದರೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ — ಹಾಗಾದರೆ ಮಾನ್ಯ ದೇವೇಗೌಡರು ಸಹ ಇಲ್ಲಿ ಮಾತನಾಡಿದ್ದು ತೀರ್ಮಾನ ಆಗಿತ್ತೋ ?

ಅಧ್ಯಕ್ಷರು — ನಿಮ್ಮನ್ನು ಶ್ಯಾಡೋ ಚೀಫ್ ಮಿನಿಸ್ಟರ್ ಎಂದು ಹೇಳಿದ್ದೇನೆ. ತಮ್ಮ ಭಾಷಣವನ್ನು ಸೂಕ್ಷ್ಮವಾಗಿ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ — ತಮ್ಮ ಪಾತಿಗೆ ಮತ್ತೊಮ್ಮೆ ಗೌರವ ಕೊಟ್ಟು ನಾನು ಕೂರುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಬಿ. ರಾಚಯ್ಯ — ಮಾನ್ಯ ಅಧ್ಯಕ್ಷರೇ, ಮಾನ್ಯ ಸದನದ ಸದಸ್ಯರ ಹಿಂದು ಗೌರವವನ್ನು ಕಾಪಾಡುವುದರಲ್ಲಿ ನಾನಾಗಲೀ ಅಥವಾ ಈ ಕಡೆ ಕೂತಿರುವವರಾಗಲೀ ಯಾರೂ ಹಿಂದೆ ಬಿದ್ದಿಲ್ಲವೆಂದು ಸ್ಪಷ್ಟಪಡಿಸಂತ್ತೇನೆ. ಎರಡನೆಯದಾಗಿ, ಸದನ ನಡೆಸತಕ್ಕ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರಾಗಿರತಕ್ಕವರು ಸದನದ ಗಮನವನ್ನು ಸೆಳೆಯುವುದಕ್ಕೆ ಈ ಸದನದ ಕೆಲವು ಕಾರ್ಯಕಲಾಪಗಳಿಗೆ ಅಡ್ಡಿ ಬಂದರೂ ಚಿಂತೆಯಿಲ್ಲವೆಂದೂ ಹೇಳಿ ಈ ಒಂದು ಸತ್ಸಾಗ್ರಹವನ್ನು ಮಾಡಿದ್ದಾರೆ. ಬಹುಶಃ ಅವರೇ ಏನಾದರೂ ಅಧಿಕಾರದಲ್ಲಿದ್ದಿದ್ದರೆ ''ಎತ್ತು ಈಯುತು ಎಂದರೆ ಕೊಟ್ಟಿಗೇಲಿ ಕಟ್ಟು ಹಾಕಿ'' ಎನ್ನುವ ಹಾಗೆ ಮಾಡಬಾರದೆಂ, ಅದರಲ್ಲಿ ಏನಾದರೂ ಇದೆಯೇ, ಎತ್ತು ಈಯುತ್ತದೆಯೋ ಎನ್ನುವ ಬಗ್ಗೆ ವಿಚಾರ ಮಾಡಬೇಕು, ಎನ್ನುವ ಹಾಗೆ ಇಲ್ಲೂ ವಿಚಾರಣೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಿನ್ನೆ ಹೇಳಿದ್ದೆ. ನಿನ್ನೆಯ ದಿವಸದವರೆವಿಗೂ ಕೂಡಾ ಸಂಬಂಧಪಟ್ಟ ಮಾನ್ಯ ಸದಸ್ಯರು ಬಂದು ಹೇಳಿಕೆಯನ್ನು ನನಗಾಗಲೀ, ಪೋಲೀಸ್ ಸ್ಟೇಷನ್‌ನಲ್ಲಾಗಲೀ ಕೊಟ್ಟಿರಲಿಲ್ಲ. ನಿನ್ನೆ ನಾನು ಅವರ ಹೇಳಿಕೆಯನ್ನು ತೆಗೆದುಕೊಂಡಿದ್ದೇನೆ. ಇಲ್ಲಿಂದ ಒಬ್ಬ ಉನ್ನತ ಅಧಿಕಾರಿಯನ್ನು ದಾವಣಗೆರೆಗೆ ಕಳುಹಿಸಿದ್ದೇನೆ, ಬಹುಶಃ ಅವರು ವಿಚಾರಣೆ ಮಾಡಿ ಯಾವ ಕಾಲಕ್ಕೆ ವರದಿಯನ್ನು ಕಳುಹಿಸಿಕೊಡುತ್ತಾರೋ ಅದನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಈ ದಿವಸದ ಒಳಗೆ ಯಾವುದೇ ಕಾಲಕ್ಕೆ ವಿಚಾರಣೆ ವರದಿ ಬಂದ ತಕ್ಷಣವೇ ಇಲ್ಲಿ ಪ್ರಕಟಣೆ ಮಾಡುತ್ತೇನೆ. ಆದಂದರಿಂದ, ಆ ದೃಷ್ಟಿಯಿಂದ ಅನೇಕ ಶಾಸಕರ ಮಾನಹರಣ ಆಗುತ್ತದೆ, ಅತ್ಯಾಚಾರ ಆಗಂತ್ತದೆಯೆಂದು ಹೇಳುತ್ತಾರೋ ಆ ಬಗ್ಗೆ ನಾನೂ ಕೂಡಾ ಸರ್ಕಾರದ ಕಾಲವನ್ನು ತೆಗೆದುಕೊಂಡಂ...

(ಗೊಂದಲ)

ಅವರು ಮಾತನಾಡುವಾಗ ನಾನು ಏನೂ ಮಾತನಾಡಲಿಲ್ಲ, ನನಗೆ ಅವರ ರೀತಿ ಅರಚುವುದಕ್ಕೆ ಆಗುವುದಿಲ್ಲ. ಯಾವ ಕಾಲಕ್ಕೆ ವರದಿ ಬರುತ್ತದೆಯೋ, ಅದು ಬಂದ ತಕ್ಷಣ ಈ ಸಭೆಗೆ.....

(ಗೊಂದಲ)

ಅಧ್ಯಕ್ಷರು—ಹೇಗೂ ನಾವು ಇಲ್ಲೆ ಇರುತ್ತೇವಲ್ಲ, ವರದಿ ಬರಲಿ, ಆ ನಂತರ ವಿಚಾರ ಮಾಡೋಣ At any moment during the course of the day.....

ಶ್ರೀ ಬಿ. ರಾಚಯ್ಯ.—ಆದುದರಿಂದ, ಸರ್ಕಾರ ನಡೆಸತಕ್ಕ ಕಾಲದಲ್ಲಿ ಅಧಿಕಾರಿಗಳ ಮೇಲೆ ಒಂದು ಹೇಳಿಕೆ ಕೊಟ್ಟ ತಕ್ಷಣ ಅವರನ್ನು ಸಸ್ಪೆಂಡ್ ಮಾಡತಕ್ಕದ್ದು ಎಂತ್ತು ಅವರ ಮೇಲೆ ಅಪನಂಬಿಕೆಯನ್ನು ವ್ಯಕ್ತಪಡಿಸುವುದಾದರೆ ಅವರಿಗೆ ಒಂದು ಸೆಕ್ಯುರಿಟಿ ಇಲ್ಲದ ಹಾಗೆ ಆಗುತ್ತದೆ. ಅಪನಂಬಿಕೆಯನ್ನು ಯನ್ನು ತೋರಿಸುವುದು ಎರಡನೆಯ ಪ್ರಶ್ನೆಯಾಗಿದೆ ಈ ಕಡೆಯ ಸದಸ್ಯರ ಗೌರವವನ್ನು ಕಾಪಾಡುವುದರ ಬಗ್ಗೆ ಎಷ್ಟು ಅಭಿಮಾನ ನಮಗೆ ಇವೆಯೋ ಅಷ್ಟೇ ಇವರ ಮೇಲೂ ನನಗೆ ಇದೆ. ಹಿಂದೆ ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದ ಶ್ರೀ ದೇವೇಗೌಡರಾಗಲೀ, ಶ್ರೀ ಬೊಮ್ಮಾಯಿಯವರಾಗಲೀ, ಶ್ರೀ ಲಕ್ಷ್ಮೀಸಾಗರ್‌ರವರಾಗಲೀ ಏನೊಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರೋ ಆಗಿನ ಕಾಲದಲ್ಲಿ ಅವರು ಹೇಳಿಕೆ ಕೊಟ್ಟ ತಕ್ಷಣ, ಸರಕಾರ ಯಾವುದೇ ಅಧಿಕಾರಿಯನ್ನಾಗಲೀ, ಸಬ್-ಇನ್ಸ್‌ಪೆಕ್ಟರನ್ನಾಗಲೀ ಸಸ್ಪೆಂಡ್ ಮಾಡಿರಲಿಲ್ಲ. ಆದರೆ ಅದಕ್ಕೂ ಮುಂದುವರೆದು ಹೇಳುವು

ದಾದರೆ ಕಳೆದ ಸಾರಿ ಕೃಷ್ಣಾರವರು ಕೊಟ್ಟ ಹೇಳಿಕೆ ಮತ್ತು ನಗಗೆ ಬಂದ ಮಾಹಿತಿಯನ್ನು ಸರಿದೂಗಿಸಿ, ಸತ್ಯಾಂಶವಿದೆಯೆಂದು ಹೇಳಿ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಟ್ಟಿದ್ದೆ. ಆ ದೃಷ್ಟಿಯಿಂದ ಸದಸ್ಯರ ಗೌರವವನ್ನು ಕಾಪಾಡುವುದಕ್ಕೆ ಮತ್ತು ಸಾರ್ವಜನಿಕರು ಇಲಾಖೆಯಲ್ಲಿ ನಂಬಿಕೆ ಇಡುವುದಕ್ಕೆ ಹಿಂದೆಂದೂ ನಡೆಯದ ರೀತಿಯಲ್ಲಿ ನಾನು ನಡೆದುಕೊಂಡು ಬಂದಿದ್ದೇನೆ. ನಿನ್ನೆಯಿಂದ ಇವತ್ತಿನವರೆಗೆ ಈ ಸಭೆಯಲ್ಲಿ ಕಾರ್ಯಕಲಾಪಗಳು ನಡೆಯದ್ದಕ್ಕೆ ಸ್ವಲ್ಪಮಟ್ಟಿಗೆ ನಾನು ವಿಷಾದಪಡುತ್ತೇನೆ. ಹಾಗೂ ಈಗ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಅವರಿಗೂ ನಾನು ಅಭಿನಂದಿಸುತ್ತೇನೆ. ಯಾರು ತಪ್ಪು ಮಾಡಿದ್ದಾರೋ ಆವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತೇನೆ. ಮತ್ತು ಈ ವಿಚಾರವನ್ನು ತಿಳಿದುಕೊಳ್ಳುವುದಕ್ಕೋಸ್ಕರ ಫೋನ್ ಕಾಂಟಾಕ್ಟ್ ಕೂಡಾ ಇಟ್ಟುಕೊಂಡಿದ್ದೇನೆ. ಆದುದರಿಂದ ಈ ವಿಚಾರವನ್ನು ಇಷ್ಟಕ್ಕೆ ನಿಲ್ಲಿಸಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಹಕಾರ ಸಂಘಗಳಲ್ಲಿ ದುಡಿಯುವ ನೌಕರರಿಗೆ ಪರಿಷ್ಕೃತ ತುಟ್ಟಿ ಭತ್ಯ ನೀಡುವ ಬಗ್ಗೆ

೫೫೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಸಗಟು ವ್ಯಾಪಾರ ಸಂಘ ಮಂಗಳೂರು ಜನತಾ ಬಜಾರ್, ದಕ್ಷಿಣ ಕನ್ನಡ ಕೃಷಿಕರ ಸಹಕಾರ ವ್ಯಾಪಾರ ಸಂಘಗಳಲ್ಲಿ ದುಡಿಯುವ ನೌಕರರಿಗೆ ಸರ್ಕಾರಿ ನೌಕರರಿಗಿ ಕೊಡುವಂತೆ ತುಟ್ಟಿ ಭತ್ಯ ಕೊಡಲಾಗುತ್ತದೆಯೆ ?

(ಆ) ಈ ಬಗ್ಗೆ ಹಾಗಿಲ್ಲದಿದ್ದಲ್ಲಿ ಅವರಿಗೆಲ್ಲಾ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆಯನ್ನು ಯಾವಾಗ ಕೊಡಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಸಗಟು ವ್ಯಾಪಾರ ಸಂಘ ನಿಯಮಿತ (ಮಂಗಳೂರು ಜನತಾ ಬಜಾರ್) ನೌಕರರಿಗೆ ಪರಿಷ್ಕೃತ ದರದಲ್ಲಿ ತುಟ್ಟಿ ಭತ್ಯವನ್ನು ೧-೪-೧೯೮೫ ರಿಂದ ಮಂಜೂರು ಮಾಡಲಾಗಿದ್ದು ಇದು ಸರ್ಕಾರಿ ನೌಕರರಿಗೆ ಕೊಡುವ ತುಟ್ಟಿ ಭತ್ಯಕ್ಕೆ ಸಮನಾಗಿರುವುದಿಲ್ಲ. ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ವ್ಯಾಪಾರ ಸಂಘದಲ್ಲಿ ದುಡಿಯುವ ನೌಕರರಿಗೆ ಸರ್ಕಾರಿ ನೌಕರರಿಗೆ ಕೊಡುವಂತೆ ತುಟ್ಟಿ ಭತ್ಯ ಕೊಡಲಾಗುತ್ತಿದೆ.

(ಆ) ತುಟ್ಟಿ ಭತ್ಯವನ್ನು ಆಯಾ ಸಂಘದ ಆರ್ಥಿಕ ಪರಿಸ್ಥಿತಿ ಪರಿಗಣಿಸಿ ಮಂಜೂರಾತಿ ನೀಡಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಸಗಟು ವ್ಯಾಪಾರ ಸಂಘ, ಮಂಗಳೂರು ಜನತಾ ಬಜಾರ್, ಇದರಲ್ಲಿ ದುಡಿಯುತಕ್ಕ ನೌಕರರಿಗೆ ತುಟ್ಟಿ ಭತ್ಯವನ್ನು ಸರ್ಕಾರೀ ನೌಕರರಿಗೆ ಕೊಡುತ್ತಿರುವಂತೆ ಕೊಡದೇ ಇರಲು ಕಾರಣವೇನು ? ಮತ್ತು ದಕ್ಷಿಣ ಕನ್ನಡ ಕೃಷಿಕರ ಸಹಕಾರ ವ್ಯಾಪಾರ ಸಂಘದ ನೌಕರರಿಗೆ ಮಾತ್ರ ಸರ್ಕಾರೀ ನೌಕರರಿಗೆ ಕೊಡುವಂತ ತುಟ್ಟಿ ಭತ್ಯವನ್ನು ಕೊಡುತ್ತಿರುವುದಕ್ಕೆ ಕಾರಣವೇನು ? ಜನತಾ ಬಜಾರ್‌ನಲ್ಲಿ ಕಳೆದ ೧೫-೨೦ ವರ್ಷದಿಂದ ಕೆಲಸ ಮಾಡುತ್ತಿರುವ ನೌಕರರು ಇದ್ದಾರೆ. ಅವರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸರ್ಕಾರೀ ನೌಕರರಿಗೆ ಕೊಡುವಂತೆ ಇವರಿಗೂ ತುಟ್ಟಿ ಭತ್ಯವನ್ನು ಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.